ಕುತೂಹಲ, ರೋಚಕತೆ, ವ್ಯಂಗ್ಯ, ನಿಟ್ಟುಸಿರು, ಸ್ವೇಚ್ಛೆ, ಸ್ವಾತಂತ್ರ್ಯ – ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣಿಸುವ ಪದ 'ಲಿವ್ ಇನ್ ರಿಲೇಷನ್‌ಶಿಪ್'. ಮದುವೆಯ ಬಂಧಕ್ಕೆ ಒಳಪಡದ 'ಸಮ್ಮತಿಯ ಸಹಬಾಳ್ವೆ'ಯ ಪರಿಕಲ್ಪನೆ ಸಮಾಜಕ್ಕೆ ಹೊಸತೇನೂ ಅಲ್ಲ. ಆದರೆ, ತರುಣ ತರುಣಿಯರ ಈ ನಂಟಿನ ಬಗ್ಗೆ ಸಾಂಪ್ರದಾಯಿಕ ಸಮುದಾಯದ ಕಣ್ಣುಗಳಲ್ಲಿದ್ದ ಉರಿ ನಿಧಾನವಾಗಿಯಾದರೂ ಕಡಿಮೆಯಾಗುತ್ತಿದೆ. 'ಸಮ್ಮತಿಯ ಸಹಬಾಳ್ವೆ'ಯ ಸಂಬಂಧಗಳನ್ನು ಕಾನೂನು ಕೂಡ ಸಹಾನುಭೂತಿಯಿಂದ ವ್ಯಾಖ್ಯಾನಿಸುತ್ತಿದೆ. ಸಂಬಂಧದಲ್ಲಿನ ಸ್ವಾತಂತ್ರ್ಯ ಹಾಗೂ ಅಸುರಕ್ಷತೆಯನ್ನು 'ಲಿವ್ ಇನ್' ನಂಟು ಗಟ್ಟಿಗೊಳಿಸುವ ಇಂಧನವೆನ್ನುವ ವ್ಯಾಖ್ಯಾನಗಳೂ ಇವೆ. ಸಮಾಜದ ಅಗ್ನಿಪರೀಕ್ಷೆಯನ್ನು ನಿರಂತರವಾಗಿ ಎದುರಿಸುತ್ತಿರುವ 'ಲಿವ್ ಇನ್' ನಂಟಿನ ವಿವಿಧ ಆಯಾಮಗಳ ಕುರಿತ ಈ ಬರಹ, ಆಧುನಿಕ ಸಂದರ್ಭದಲ್ಲಿನ ಸಾಮಾಜಿಕ ಚಲನೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವೂ ಆಗಿದೆ.

